# ಟೀವಿಯೊಳಗೆ ತೂರಿ...

ಒಂದು ಕಾಲದ ಸ್ನೇಹಿತ ನಿರ್ದೇಶಿಸಿದ್ದ ಸಿನಿಮಾ ಎಂದು ಅತಿಥಿ ಪಾತ್ರವೊಂದನ್ನು ಅವರು ಒಪ್ಪಿಕೊಂಡಿದ್ದರು. ಪ್ರೀತಿಗೆ ಕಟ್ಟುಬಿದ್ದು ಪ್ರಚಾರದ ಸುದ್ದಿಗೋಷ್ಠಿಯಲ್ಲಿ ಇದ್ದದ್ದು. ದಿವಿನಾದ ಸೋಫಾ ಮೇಲೆ ಕಾಲಮೇಲೆ ಕಾಲು ಹಾಕಿ ಕುಳಿತಿದ್ದ ಅವರು ಮುದ್ರಣ ಮಾಧ್ಯಮದವರ ಜೊತೆ ಲೋಕಾಭಿರಾಮ ಮಾತನಾಡುತ್ತಾ ಇದ್ದರು. 'ಆಫ್ ದಿ ರೆಕಾರ್ಡ್' ಮಾತುಗಳೇ ಹೆಚ್ಚು ಇದ್ದುದರಿಂದ ಪೆನ್ನು, ನೋಟ್ ಪ್ಯಾಡ್‌ಗಳಿಗೆ ಬಿಡುವು. ಸೋಫಾದ ಅಂಚಿನಲ್ಲಿ ಕುಳಿತಿದ್ದ ಅವರು ಮಾತಿನ ವರಸೆಯಲ್ಲಿ ಎಡಗೈಯನ್ನೊಮ್ಮೆ ಮೇಲಕ್ಕೆತ್ತಿದರು. ಚಾನೆಲ್‌ನ ಮೈಕೊಂದು ಕೈಗೆ ತಾಕಿತು. 'ಅಯ್ಯೋ ದೇವರೇ... ಬೇಗ ಹೋಗಿ ಈ ಕೈ ತೊಳೆದುಕೊಂಡು ಬರಬೇಕು. ಇಲ್ಲವಾದರೆ ನನ್ನ ಕೈ ಮಾತನಾಡಿದ್ದನ್ನೂ ಈ ಚಾನೆಲ್‌ನವರು ತೋರಿಸಿಬಿಡುತ್ತಾರೆ' ಎಂದು ಅವರ ಚಟಾಕಿ ಹಾರಿಸಿದಾಗ ಆ ಚಾನೆಲ್‌ನವರನ್ನು ಹೊರತುಪಡಿಸಿ ಮಿಕ್ಕೆಲ್ಲರೂ ನಕ್ಕರು.

ಸುಮಾರು ಮೂವತ್ತು ವರ್ಷಗಳಿಂದ ಸಿನಿಮಾ ಲೋಕದಲ್ಲಿ ಕನಸುಗಳ ಬೀಜ ಬಿತ್ತಿ, ಮಿಶ್ರ ಫಸಲು ತೆಗೆದ ನಟ ಅವರು. ಅವರ ತಂದೆ ಕೂಡ ವೀರ ನಿರ್ಮಾಪಕರೇ. ಬಾಲ್ಯದಿಂದ ಸಿನಿಮಾದ ಗಂಧಗಾಳಿ ಅವರನ್ನು ತೀಡಿದ್ದರಿಂದ ಅದರ ಆಳ, ಅಗಲ ಚೆನ್ನಾಗಿ ಗೊತ್ತಿತ್ತು. ಪ್ರಚಾರದ ಮುಖ್ಯ ಮಾಧ್ಯಮವಾಗಿ ಚಾನೆಲ್‌ಗಳು ಹೊಳೆಯತೊಡಗಿದ ಹೊತ್ತಿನಲ್ಲೂ ಅವರಿಗೆ ಟೀವಿಯವರ ಧೋರಣೆಯ ಕುರಿತು ತಕರಾರಿತ್ತು. ಸುಮ್ಮನೆ ಮೈಕನ್ನು ಮುಂದೆ ಹಿಡಿದು, ಏನಾದರೂ ಹೇಳಿ ಎಂದು ಕೇಳುವಂಥ ತಯಾರಿ ಇಲ್ಲದ ಜನರನ್ನು ಅವರು ತರಾಟೆಗೆ ತೆಗೆದುಕೊಂಡಿದ್ದರು. ಸಿನಿಮಾದ ಖಾಸಗೀತನವನ್ನು ಬೀದಿಗೆಳೆದದ್ದೇ ಟೀವಿ ಚಾನೆಲ್‌ಗಳು ಎನ್ನುವ ಅಭಿಪ್ರಾಯವೂ ಅವರದ್ದಾಗಿತ್ತು. ತಮ್ಮ ಸಿನಿಮಾ ಪ್ರಚಾರಗಳಿಗೂ ಅವರು ಟೀವಿಯನ್ನು ಅಷ್ಟಾಗಿ ನೆಚ್ಚಿಕೊಳ್ಳುತ್ತಿರಲಿಲ್ಲ.

ಕಾಲಚಕ್ರ ಉರುಳಿತು. ಕನಸುಗಾರ ಎನ್ನುವ ಗುಣವಿಶೇಷಣ ಕೂಡ ಮಂಕಾಯಿತು. ಗತ್ತು ಮಾತ್ರ ಕಡಿಮೆಯಾಗಲಿಲ್ಲ. ಇಂಥ ಸಂದರ್ಭದಲ್ಲಿ ಅಪ್ಪನ ಪಾತ್ರದಲ್ಲಿ ಅವರು ಕಾಣಿಸಿಕೊಂಡ ಸಿನಿಮಾ ಗಳಿಕೆಯಲ್ಲಿ ಸದ್ದು ಮಾಡಿತು. ಆ ಸಿನಿಮಾದ ನಾಯಕ ನಟ ಇವರನ್ನು ತಂದೆಯ ಪಾತ್ರಕ್ಕೆ ಒಪ್ಪಿಸಿದ್ದನ್ನು ಕಂಡ ಗಾಂಧಿನಗರದ ಕೆಲವರು ಮುತ್ತು, ಮಾಣಿಕ್ಯ ಎಂದೆಲ್ಲಾ ಬಣ್ಣಿಸಿದರು. ಆ ಸಿನಿಮಾ ಗೆದ್ದಮೇಲೆ ಮತ್ತೆ ಚಿಕ್ಕ ವಯಸ್ಸಿನ ನಾಯಕಿ ಜೊತೆ ಡ್ಯುಯೆಟ್ ಹಾಡಿದ ಸಿನಿಮಾ ತೆರೆಕಂಡಿತು. ಅದು ಬೋರಲಾಯಿತು.

ಟೋಪಿ ಹಾಕಿದ ತಲೆ, ಎದ್ದು ಕಾಣುವ ಬಿಳಿ ಗಡ್ಡ, ಅಭಿಮಾನಿಗಳು ಈಗಲೂ ಚಪ್ಪರಿಸುವ ಗತವೈಭವ ಎಲ್ಲವೂ ಇರುವ ಅವರು ಒಂದು ಕಾಲದಲ್ಲಿ ಬಾಯಿಗೆ ಬಂದಂತೆ ಬೈಯುತ್ತಿದ್ದ ಟೀವಿ ಚಾನೆಲ್‌ನಲ್ಲೇ ಈಗ ಕುರ್ಚಿಯೊಂದರ ಮೇಲೆ ಕುಳಿತಿದ್ದಾರೆ. ಅಂದು ಮೈಕ್ ಕೈಗೆ ತಾಕಿತ್ತು. ಈಗ ಅದು ಅಂಗಿಗೇ ಅಂಟಿಕೊಂಡಿದೆ. ಚಿಣ್ಣರು, ಚೆನ್ನರು ನೃತ್ಯ ಮಾಡಿದರೆ ಇವರು ಮರದ ಸುತ್ತಿಗೆಯಿಂದ ಮೇಜಿಗೆ ಬಡಿದು ಅಂಕಗಳನ್ನು ನೀಡುತ್ತಾರೆ. 'ಟೀವಿ, ಸಿನಿಮಾ ಒಂದಾದ ಮೇಲೆ...' ಎನ್ನುವ ಹಾಡನ್ನು ಇವರಿಗೆ ಅನ್ವಯಿಸಿ ಹೇಳಬಹುದೇನೋ?

**● ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68